**O.S.No.118/2018 - P.W.1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 05-07-2024.**

**ಮುಂದುವರೆದ ಪಾಟೀ ಸವಾಲು - ಪ್ರತಿವಾದಿಗಳ ಪರ ವಕೀಲರಿಂದ :**

**1)** ಈ ದಾವೆಯಲ್ಲಿ ನಮ್ಮ ವಕೀಲರು ಸರಿಯಾಗಿ ದಾವೆಯನ್ನು ನಡೆಸಿರುತ್ತಾರೆ. ಅವರ ಮೇಲೆ ಯಾವುದೇ ಆಕ್ಷೇಪಣೆ ಇಲ್ಲ. ನಿ.ಪಿ.4 ಕೇವಲ ಪೌತಿ ಖಾತೆಗೆ ಸಂಬಂಧಿಸಿದ ದಾಖಲೆಯಾಗಿದ್ದು, ಸದರಿ ದಾಖಲೆಯನ್ನು ನಾವು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ.4 ರ ಆಧಾರದ ಮೇಲೆ ಯಾವುದೇ ದಾಖಲೆಗಳು ಬದಲಾವಣೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಆರೋಗ್ಯವಾಗಿ ಇದ್ದು, ನ್ಯಾಯಾಲಯದ ಎದುರು ಬಂದರೆ ವಾಸ್ತವಾಂಶ ಹೊರಗೆ ಬರುತ್ತದೆ ಎಂಬ ಕಾರಣಕ್ಕೆ ನಿ.ಪಿ.1 ನ್ನು ಮಾಡಿಕೊಟ್ಟು ನನ್ನ ಮುಖಾಂತರ ಸಾಕ್ಷಿ ನುಡಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನಿ.ಪಿ.3 ನಾವು ಸುಳ್ಳು ಮಾಹಿತಿ ನೀಡಿ ತಯಾರಿಸಿದ ದಾಖಲೆ ಎಂದರೆ ಸರಿಯಲ್ಲ. ನಿ.ಪಿ.4 ರ 2 ನೇ ಪುಟ ಕಂದಾಯ ಅಧಿಕಾರಿಗಳೊಂದಿಗೆ ನಾವು ಶಾಮೀಲಾಗಿ ತಯಾರಿಸಿದ ದಾಖಲೆ ಎಂದರೆ ಸರಿಯಲ್ಲ. ನಿ.ಪಿ.5 ಮತ್ತು ನಿ.ಪಿ.6 ನಮ್ಮ ತಂದೆ ಪ್ರತಿವಾದಿಗಳಿಗೆ ಮೋಸ ಮಾಡಲು ಸೃಷ್ಟಿ ಮಾಡಿ ಹಾಜರುಪಡಿಸಿದ ದಾಖಲೆಗಳು ಎಂದರೆ ಸರಿಯಲ್ಲ. ನಿ.ಪಿ.46 ರ ಆದೇಶದ ಆಧಾರದ ಮೇಲೆ ದಾವಾಸ್ವತ್ತಿನ ಮೇಲೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ ನಿ.ಪಿ.7 ರಿಂದ ನಿ.ಪಿ.16 ದಾಖಲೆಗಳನ್ನು ಸೃಷ್ಟಿಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ.15 ರಿಂದ ನಿ.ಪಿ.21 ನಿ.ಪಿ.46 ರ ಪ್ರಕಾರ ಮುಂದುವರೆದ ದಾಖಲೆಗಳು ಎಂದರೆ ಸರಿ. ನಿ.ಪಿ.23 ರಿಂದ ನಿ.ಪಿ.32 ದಾಖಲೆಗಳು ರಿಟ್ ಅರ್ಜಿಯಲ್ಲಿ ಪ್ರಶ್ನಿತವಾಗಿವೆ ಎಂದರೆ ಸರಿಯಿಲ್ಲ. ನಿ.ಪಿ.35 ರಿಂದ ನಿ.ಪಿ.42 ಹಾಗೂ ನಿ.ಪಿ.54 ಉಪವಿಭಾಗಾಧಿಕಾರಿಗಳ ಆದೇಶದಂತೆ ನಮೂದಾಗಿವೆ ಎಂದರೆ ಸರಿ. ನಿ.ಪಿ.43 ಹಾಗೂ ನಿ.ಪಿ.46 ಮೇಲ್ಕಂಡ ರಿಟ್ ಅರ್ಜಿಯಲ್ಲಿ ಪ್ರಶ್ನಿತವಾಗಿದೆ ಎಂದರೆ ಸರಿ. ನಿ.ಪಿ.48 ಮತ್ತು ನಿ.ಪಿ.49 ನಾವು ಕಂದಾಯ

ಅಧಿಕಾರಿಗಳೊಂದಿಗೆ ಶಾಮೀಲಾಗಿ ಸೃಷ್ಟಿ ಮಾಡಿದ ದಾಖಲೆಗಳು ಎಂದರೆ ಸರಿಯಲ್ಲ. ನಿ.ಪಿ.47 ಹಾಗೂ ನಿಪಿ.51 ರಿಂದ 53 ನಮ್ಮ ಹಕ್ಕನ್ನು ಪ್ರತಿಪಾದಿಸುತ್ತಿಲ್ಲ ಎಂದರೆ ಸರಿಯಲ್ಲ. ನಿ.ಪಿ.55 ರಿಂದ ನಿ.ಪಿ.58 ಪ್ರತಿವಾದಿಗಳು ಬೆಳೆಸಿರುವ ದ್ರಾಕ್ಷಿ ತೋಟದ ಛಾಯಾ ಚಿತ್ರ ಆಗಿರುತ್ತದೆ ಎಂದರೆ ಸರಿಯಲ್ಲ. ನಾವೂ ದ್ರಾಕ್ಷಿ ಬೆಳೆ ಬೆಳೆಯುತ್ತಿದ್ದೇವೆ ಎಂದು ನುಡಿಯುತ್ತೇನೆ. ನಿ.ಪಿ.64 ರಿಂದ ನಿ.ಪಿ.67 ಕ್ಕೂ ಹಾಗೂ ದಾವಾಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿ.ಪಿ.68 ದಾವಾಸ್ವತ್ತಿನ ಬಗ್ಗೆ ಸುಳ್ಳು ಹಕ್ಕು ಪ್ರತಿಪಾದಿಸಲು ತಯಾರಿಸಿದ ದಾಖಲೆ ಎಂದರೆ ಸರಿಯಲ್ಲ. ನಿ.ಪಿ.69 ದಿ.16-11-2015 ರಿಂದ ದಿ.03-03-2018 ರ ವರೆಗೆ ನಮ್ಮ ತಂದೆಗೆ ಅನಾರೋಗ್ಯ ಹಾಗೂ ಅನಾನುಕೂಲ ಇತ್ತು ಎಂದು ತೋರಿಸುತ್ತಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಗೆ ದಿ.16-09-2015 ಮತ್ತು ದಿ.16-11-2015 ರ ಮಧ್ಯೆ ದಾವೆ ದಾಖಲಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಅವರಿಗೆ ಆ ಸಮಯದಲ್ಲಿ ಆರೋಗ್ಯ ಸರಿಯಿರಲಿಲ್ಲ ಎಂದು ನುಡಿಯುತ್ತೇನೆ. ನಿ.ಪಿ.69 ನ್ನು ಸೃಷ್ಟಿ ಹಾಜರುಪಡಿಸಿರುತ್ತೇವೆ ಹಾಗೂ ನಮ್ಮ ತಂದೆಗೆ ಯಾವುದೇ ಅನಾರೋಗ್ಯ ಇರಲಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲದೇ ಇರುವುದರಿಂದ ಈ ದಾವೆ ವಜಾ ಆಗುವುದರಿಂದ ನಮಗೆ ಯಾವುದೇ ತೊಂದರೆಯಾಗುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲಾ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**